NRIs
Easy Money Transfers* >>
*Conditions Apply
citi
let's

ರೂಪತಾರಾ

ಉದಯವಾಣಿ
ಕನ್ನಡ ದಿನಪತ್ರಿಕೆ

ಸೋಮವಾರ,ಫೆಬ್ರವರಿ 11,2008 ಇಂದಿನ ವಾರ್ತೆಗಳು

ment in the Udayavani print edition
Ad Booking
UDAY




English Edition
ತರಂಗ
ರೂಪತಾರಾ
ಸುದ್ದಿಗಳು
ಮುಖಪುಟ
ಪ್ರಾದೇಶಿಕ
ರಾಜ್ಯ
ರಾಷ್ಟ್ರೀಯ
ಅಂತಾರಾಷ್ಟ್ರೀಯ
ಕ್ರೀಡೆ
ಮುಂಬಯಿ ದರ್ಶನ
ಗಲ್ಫ್ ವಾರ್ತೆ
ಸಂಸ್ಕೃತಿ-ಸಾಹಿತ್ಯ-ಕಲೆ
ಚಲನಚಿತ್ರ
ನಮ್ಮ ಬೆಂಗಳೂರು
ಕರ್ನಾಟಕ ಸಂಪದ
ಎನ್ಆರ್ಐ ಅಂಕಣ
ದಿನನಿತ್ಯ
ವೈವಾಹಿಕ
ಶ್ರದ್ಧಾಂಜಲಿ
ಗ್ರಹಗತಿ
ಸ್ಥಳೀಯ ಮಾರುಕಟ್ಟೆ
ಅಂಕಣ
ಪುಸ್ತಕ ಪರಿಚಯ
ಕನ್ನಡ ನಾಡು ಸಂಪರ್ಕ
ಹಿಂದಿನ ವಾರ್ತೆಗಳು

ರಾಜ್ಯ

ಹಿಂದೆ

# ಅನಕೃ ಸ್ಮಾರಕ ನಿರ್ಮಾಣಕ್ಕೆ ಸರ್ಕಾರ ತಿಲಾಂಜಲಿ

★ವೈ.ಗ. ಜಗದೀಶ್

★ಶತಮಾನೋತ್ಸವ ವೇಳೆ ಕೈಗೂಡದ ಕನಸು
★ಅನಕೃ ಮನೆಯಿದ್ದ ಜಾಗ ಪರರಿಗೆ ಹಸ್ತಾಂತರ
★ಈ ಜಾಗದ ಬದಲು ಬೇರೆ ಸ್ಥಳಕ್ಕೆ ಹುಡುಕಾಟ
★ಪ್ರತಿಷ್ಠಾನದ 14 ವರ್ಷದ ಯತ್ನ ನಿಷ್ಫಲ

ಬೆಂಗಳೂರು, ಫೆ. 10: ನಿರಭಿಮಾನಿ ಗಳಾಗಿದ್ದ ಕನ್ನಡಿಗರನ್ನು ಅಭಿಮಾನಧನರ ನ್ನಾಗಿ ಮಾಡಿ, ನಾಡು ಕಟ್ಟುವ ಕಾಯಕ ಕಲಿಸಿದ ಅ.ನ.ಕೃಷ್ಣರಾಯರ ಮನೆಯ ಜಾಗದಲ್ಲಿಯೇ ಸ್ಮಾರಕ ನಿರ್ಮಿಸುವ ಆಶಯಕ್ಕೆ ಸರ್ಕಾರ ತಿಲಾಂಜಲಿ ಬಿಟ್ಟಿದೆ.

ಅದ್ವಿತೀಯ ಕಾದಂಬರಿಕಾರರು, ಕನ್ನಡದ ಕಟ್ಟಾಳುವೂ ಆಗಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಿತ್ರಕಲಾ ಅಕಾಡೆಮಿಗಳಂತಹ ಸಂಸ್ಥೆಗಳನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿದ್ದ ಅನಕೃ ಅವರ ಶತಮಾನೋತ್ಸವ ಆಚರಿಸಬೇಕಾದ ಸರ್ಕಾರ, ಅದನ್ನಂತೂ ಮಾಡಲಿಲ್ಲ. ಆದರೆ ಕನ್ನಡಿಗರ ಬಹುದಿನದ ಕನಸನ್ನಂತೂ ಮಣ್ಣುಪಾಲು ಮಾಡಿದೆ.

ಯಡಿಯೂರಪ್ಪ ಹಣಕಾಸು ಸಚಿವರಾಗಿದ್ದಾಗ 2007ರ ಬಜೆಟ್‌ನಲ್ಲಿ ಅ.ನ.ಕೃಷ್ಣರಾಯರ ಸ್ಮಾರಕ ನಿರ್ಮಿಸಲು ಒಂದು ಕೋಟಿ ರೂ. ಅನುದಾನ ನೀಡಿದ್ದರು. ವಿಶ್ವೇಶ್ವರಪುರಂ ಬಡಾವಣೆಯ ನಿವೇಶನ ಸಂಖ್ಯೆ 13 ರಲ್ಲಿ 200 ಚದುರಡಿ ವಿಸ್ತೀರ್ಣದ 'ಅನ್ನಪೂರ್ಣ'ದಲ್ಲಿ ಅ.ನ.ಕೃ. ವಾಸವಾಗಿದ್ದರು. 60 ದಶಕದಲ್ಲಿ ಅನ್ನಪೂರ್ಣ ಕನ್ನಡ ಚಳವಳಿಗಾರರ, ಬಡ ಕನ್ನಡ ವಿದ್ಯಾರ್ಥಿಗಳ, ಸಾಹಿತ್ಯ ಪ್ರೇಮಿಗಳ ಆಶ್ರಯ ತಾಣವಾಗಿತ್ತು. ಬರೆದೇ ಬದುಕಬೇಕಾದ ಬಡತನದಲ್ಲಿದ್ದ ಅನಕೃ ಅವರ ಮನೆಯಲ್ಲಿ ನಿತ್ಯದಾಸೋಹವೇ ನಡೆಯುತ್ತಿತ್ತು.

ಅವರು ವಾಸಿಸಿ, ಕನ್ನಡದ ಹೋರಾಟಕ್ಕೆ ಭದ್ರಬುನಾದಿ ಹಾಕಿದ್ದ ಮನೆಯಲ್ಲಿ ಅವರ ಸ್ಮಾರಕ ಭವನ ನಿರ್ಮಿಸಿ, ನಿರಂತರ ಸಾಹಿತ್ಯ ಚಟುವಟಿಕೆ, ಅವರ ಪುಸ್ತಕಗಳ ಪ್ರದರ್ಶನ ಮತ್ತಿತರ ಕೆಲಸಗಳನ್ನು ನಡೆಸಬೇಕೆಂಬುದು ಕನ್ನಡಿಗರ ಬಹುದಿನದ ಕನಸು. ಕುಮಾರಸ್ವಾಮಿ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಚಿತ್ರನಿರ್ದೇಶಕ ಟಿ.ಎನ್. ಸೀತಾರಾಂ ಇಂತಹದೊಂದು ಪ್ರಶ್ನೆಯನ್ನು ಅವರ ಮುಂದಿಟ್ಟಿದ್ದರು. ಆಗಲೇ ಕುಮಾರಸ್ವಾಮಿಯವರು ವಿ.ವಿ. ಪುರಂನಲ್ಲಿರುವ ಮನೆಯ ಜಾಗದಲ್ಲೇ ಸ್ಮಾರಕ ನಿರ್ಮಿಸುವ ಭರವಸೆ ನೀಡಿದ್ದರು. ಹಾಗಾಗಿಯೇ ಬಜೆಟ್‌ನಲ್ಲಿ ಒಂದು

**ವರ್ಗೀಕೃತ ಜಾಹೀರಾತು**
ರಿಯಲ್ ಎಸ್ಟೇಟ್ new
ಆಸ್ತಿ ವಿಕ್ರಯ
ಉದ್ಯೋಗಾವಕಾಶ

ಜಾಹೀರಾತು ಬುಕ್ ಮಾಡಿ
- ಅಂತರ್ ಜಾಲ ಆವೃತಿ
- ಮುದ್ರಿತ ಆವೃತಿ

**ಅಭಿಪ್ರಾಯ**
ಮುಂಬಯಿ ಅಶಾಂತಿ/ಗಲಭೆಯನ್ನು ರಾಜಕೀಯ ಗಿಮಿಕ್ ಎಂದು ನೀವು ಭಾವಿಸುವಿರಾ ?

| | |
|---|---|
| ಹೌದು | ○ |
| ಇಲ್ಲ | ○ |
| ಗೊತ್ತಿಲ್ಲ | ○ |

ಅಭಿಪ್ರಾಯ
ನಿನ್ನೆಯ ಮತಗಣನೆ

ಕೋಟಿ ರೂ. ಒದಗಿಸಲಾಗಿತ್ತು.
ಇದಾಗಿ ಎರಡು ವರ್ಷ ಕಳೆದರೂ ಈ ಕಡತಕ್ಕೆ ಜೀವ ಬಂದಿರಲಿಲ್ಲ. ಮನುಬಳಿಗಾರ್ ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರಾಗಿ ಬಂದ ಮೇಲೆ ಈ ಕಡತ ಮತ್ತೆ ಓಡಾಡತೊಡಗಿದೆ. 3-1-2008 ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಹೊರಡಿಸಲಾದ ಪತ್ರದಲ್ಲಿ ಅನಕೃ ಮನೆಯಿದ್ದ ಜಾಗದಲ್ಲಿ ಸ್ಮಾರಕ ನಿರ್ಮಿಸಲು ಸಾಧ್ಯವಿಲ್ಲ ಎಂದು ಹೇಳಿರುವುದು ಕನ್ನಡಿಗರಿಗೆ ಮತ್ತೆ ನಿರಾಶೆ ತರುವ ಸಂಗತಿಯಾಗಿದೆ.
'ಈ ನಿವೇಶನದ ಅರ್ಧಭಾಗ ಖರೀದಿಸಿದ ಎನ್.ವೇಲುಸ್ವಾಮಿ ಕಟ್ಟಡ ಕಟ್ಟಿ ವಾಸಿಸಿದ್ದಾರೆ. ಇನ್ನರ್ಧ ಜಾಗವನ್ನು ಖರೀದಿಸಿದ ಪಿ.ಆರ್. ನರಸಿಂಹಶೆಟ್ಟಿ ಯವರು ಈಗಿರುವ ಹಳೆ ಶಿಥಿಲಾವಸ್ಥೆಯ ಕಟ್ಟಡ ಒಡೆದು, ಹೊಸದಾಗಿ ಕಟ್ಟಡ ಕಟ್ಟಲು ಮುಂದಾಗಿದ್ದಾರೆ. ಈ ಸ್ಥಳವನ್ನು ವಶಪಡಿಸಿಕೊಂಡಲ್ಲಿ 4 ಬಿಡಿಎ ನಿವೇಶನಗಳನ್ನು ನೀಡಲು ನರಸಿಂಹಶೆಟ್ಟಿ ಕೋರಿದ್ದಾರೆ. ಈ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಸ್ಥಳಾವಕಾಶ ಕಡಿಮೆ ಎಂದು ಭಾವಿಸಲಾಗಿದೆ' ಎಂದು ಸಂಸ್ಕೃತಿ ಇಲಾಖೆ ನಿಖರವಾಗಿ ಹೇಳಿದ್ದು, ಅಲ್ಲಿಗೆ 'ಅನ್ನಪೂರ್ಣ' ಜಾಗದಲ್ಲಿ ಸ್ಮಾರಕ ಭವನ ನಿರ್ಮಾಣ ಅಸಾಧ್ಯದ ಸಂಗತಿಯಾಗಿದೆ.
ಸ್ಮಾರಕದ ಕನಸು: 1994 ರಲ್ಲಿ ಅನಕೃ ಅಭಿಮಾನಿಗಳು ಸೇರಿ ಶುರುಮಾಡಿದ 'ಅನಕೃ ಪ್ರತಿಷ್ಠಾನ'ದ ಉದ್ಘಾಟನೆ ನೆರವೇರಿಸಿದ ಅಂದಿನ ಮುಖ್ಯಮಂತ್ರಿ ವೀರಪ್ಪಮೊಯಿಲಿ ಅವರಿಂದ ಹಿಡಿದು, ಇತ್ತೀಚಿನ ಎಚ್.ಡಿ. ಕುಮಾರಸ್ವಾಮಿಯವರೆಗೂ ಆಗಿಹೋದ ಎಲ್ಲಾ ಮುಖ್ಯಮಂತ್ರಿಗಳು ಅನಕೃ ಸ್ಮಾರಕ ನಿರ್ಮಿಸಲು ಜಾಗ ಕೊಡುವುದಾಗಿ ಭರವಸೆ ನೀಡುತ್ತಾ ಬಂದಿದ್ದಾರಾದರೂ ಅದು ಜಾರಿಗೆ ಬಂದಿಲ್ಲ.
ಅನಕೃ ಪ್ರತಿಷ್ಠಾನವು ಕೆ.ಆರ್.ರಸ್ತೆಯ ರಾಯರಾಯರ ಕಲ್ಯಾಣ ಮಂಟಪದ ಆಸುಪಾಸಿನಲ್ಲಿ 100/100 ಅಡಿ ಜಾಗವನ್ನು ನೀಡಿದರೆ ಅಲ್ಲಿ ಸ್ಮಾರಕಭವನ ನಿರ್ಮಿಸುವುದಾಗಿ ಸರ್ಕಾರಕ್ಕೆ ಲಿಖಿತವಾಗಿ ತಿಳಿಸಿತ್ತು. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಆಗ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿದ್ದ, ಪ್ರತಿಷ್ಠಾನದ ಅಧ್ಯಕ್ಷರೂ ಆಗಿದ್ದ ಹಾರನಹಳ್ಳಿ ರಾಮಸ್ವಾಮಿ ಅವರ ಸಮ್ಮುಖದಲ್ಲಿಯೇ ಶೀಘ್ರವಾಗಿ ಈ ಜಾಗವನ್ನು ಪ್ರತಿಷ್ಠಾನಕ್ಕೆ ಹಸ್ತಾಂತರಿಸಿ ಎಂದು ಆದೇಶಿಸಿದ್ದರು. ಆ ಸಮಯದಲ್ಲಿ ಚಿದಾನಂದಮೂರ್ತಿ, ಎಲ್. ಎಸ್. ಶೇಷಗಿರಿರಾವ್, ವಾಟಾಳ್ ನಾಗರಾಜ್ ಕೂಡ ಇದ್ದರು. ಆದರೂ ಕೂಡ ಈವರೆಗೂ ಯಾವ ಜಾಗವೂ ಪ್ರತಿಷ್ಠಾನಕ್ಕೆ ಲಭ್ಯವಾಗಿಲ್ಲ.

ಈಗಲೂ ಕೂಡ ಜಾಗ ಕೊಟ್ಟರೆ ಪ್ರತಿಷ್ಠಾನ ಸ್ಮಾರಕ ಭವನ ನಿರ್ಮಿಸಲು ಸಿದ್ಧವಿದೆ ಎಂದು ಹೇಳುವ ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಟಿ. ಚಂದ್ರಶೇಖರ್, ಸರ್ಕಾರ ನೀಡಿದ ಒಂದುಕೋಟಿ ರೂ.ಗಳನ್ನು ಕೊಟ್ಟರೆ ಸಾಕು. ಪ್ರತಿಷ್ಠಾನದ ಉಪಾಧ್ಯಕ್ಷರಾದ ನಿರ್ಮಾಣ್ ಶೆಲ್ಟರ್ಸ್‌ನ ಲಕ್ಷ್ಮೀನಾರಾಯಣ ಅವರು ಕಟ್ಟಡ ಕಟ್ಟಿಸಿಕೊಡುವ ಭರವಸೆ ನೀಡಿದ್ದಾರೆ ಎಂದು ಹೇಳುತ್ತಾರೆ.
14 ವರ್ಷದಿಂದ ನಿರಂತರವಾಗಿ ಪ್ರಯತ್ನಿಸುತ್ತಿದ್ದರೂ ಅನಕೃ ಸ್ಮಾರಕ ಭವನ ನಿರ್ಮಿಸಲು ಸರ್ಕಾರ ಜಾಗ ನೀಡದಿರುವ ಬಗ್ಗೆ ವೃದ್ಧಾಪ್ಯದ ಅಂಚಿನಲ್ಲಿರುವ, ಸದಾ ಅನಕೃ ಹೆಸರು ಉಳಿಸಲು ಶ್ರಮಿಸುತ್ತಿರುವ ಚಂದ್ರಶೇಖರ್ ವಿಷಾದಿಸುತ್ತಾರೆ. ಈಗಲಾದರೂ ಸಂಸ್ಕೃತಿ ಇಲಾಖೆ ಜಾಗ ಕೊಡಲು ಮುಂದಾಗಬೇಕಿದೆ.

[Email to a friend] [Previous] [Next] [Print this story] [Top]

Do you own a Small Business?
Attract more customers - Advertise to 5 crore registered users on Rediff. Prices start at 3000 Rupees
Contact us for Response Advertising

▲ Advertise on Rediff Pay4Clicks

ದಿನ ವಿಶೇಷ: **ಧರ್ಮ ಧರ್ಮಗಳ ಸಮನ್ವಯದಿಂದ ಶಾಂತಿ: ಡಾ| ಕಲಾಂ** ಪ್ರತಿಯೊಂದು ಧರ್ಮದವರೂ ಇತರ ಧರ್ಮಗಳ ಸಾರವನ್ನು ತಿಳಿದುಕೊಳ್ಳಬೇಕು. ಅಂತಹ ಧಾರ್ಮಿಕ